(46)

# ಕರ್ನಾಟಕ ವಿಧಾನ ಪರಿಷತ್ತು

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಬಿ.ಎಂ.ಫಾರೂಕ್ ರವರು ನಿಯಮ-72ರಡಿ ಮಂಡಿಸಿರುವ ಸೂಚನಾ ಪತ್ರಕ್ಕೆ ಉತ್ತರ

*******

**ವಿಷಯ:** ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸುರತ್ಕಲ್, ಮಂಗಳೂರು ಬಳಿ ಅತೀವೇಗವಾಗಿ ಬೆಳೆಯುತ್ತಿರುವ ಮತ್ತೊಂದು ನಗರ ಇದು, ಒಂದೆಡೆ ಸುಂದರವಾದ ಬೀಚ್, ಮತ್ತೊಂದೆಡೆ ಕೈಗಾರಿಕೆಗಳು, ಒಟ್ಟಿನಲ್ಲಿ ಸುರತ್ಕಲ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು ಭಾವೈಕ್ಯತೆಯ ಒಂದು ನಗರ. ಆದರೆ ಕಳೆದ 4 ವರ್ಷಗಳಿಂದ ಇಲ್ಲಿನ ಜನರ ಜೀವನ ನರಕ ಸದೃಶ. ಸದಾ ಮೂಗು ಮುಚ್ಚಿ ಓಡಾಡುವ ಇಲ್ಲವೇ ಇಲ್ಲಿ ಬಾಳುವ ಪರಿಸ್ಥಿತಿ ಇಲ್ಲಿನ ನಿವಾಸಿಗಳದ್ದು, ಇದಕ್ಕೆ ಕಾರಣ ಯು.ಜಿ.ಡಿ ಯೋಜನೆಯ ವೈಫಲ್ಯ, ಹನ್ನೆರಡು ವರ್ಷಗಳ ಹಿಂದೆ ನಿರ್ಮಾಣಗೊಂಡ ಯು.ಜಿ.ಡಿ ಯೋಜನೆಯ ಒಳಚರಂಡಿ ಕಾಮಗಾರಿಯೂ ಸಂಪೂರ್ಣ ವಿಫಲಗೊಂಡು, ಯೋಜನೆಯು ಸಫಲವಾಗದೇ ಇಲ್ಲಿನ ಜನರಿಗೂ ನೆಮ್ಮದಿ ಇಲ್ಲದ ಪರಿಸ್ಥಿತಿ ನಿರ್ಮಾಣಗೊಂಡಿದೆ. ಭೂಮಿಯ ಒಳಗಿನ ಕೊಳವೆಯ ಮೂಲಕ ಹೋಗಬೇಕಿದ್ದ ಡ್ರೈನೇಜ್ ನೀರೆಲ್ಲಾ ಮೇಲೆ ಬಂದು ರಸ್ತೆಯಲ್ಲೇ ಹರಿಯುತ್ತಿದೆ. ಇದರಿಂದಾಗಿ ಇಲ್ಲಿನ ಬಾವಿಗಳೆಲ್ಲವೂ ಕಲುಷಿತಗೊಂಡಿವೆ. ಮಳೆಗಾಲದಲ್ಲಿ ಚರಂಡಿಯೊಳಗಿನ ಕಲ್ಮಶಗಳೆಲ್ಲಾ ರಸ್ತೆಯಲ್ಲೇ ಹೊಂದಿಕೊಂಡಿರುತ್ತದೆ. ಇದರಿಂದಾಗಿ ಇಲ್ಲಿನ ನಿವಾಸಿಗಳ ಜೀವನಕ್ಕಷ್ಟೆ ಅಲ್ಲ ಅವರ ಭಾವನಾತ್ಮಕ ಆಚರಣೆಗಳಿಗೂ ದಕ್ಕೆಯುಂಟಾಗಿದೆ. ಮಸೀದಿಯಲ್ಲಿ ನಮಾಜ್‌ಗೆ ಬರುವವರಿಗೆ ಅಂಗಸ್ನಾನ ಮಾಡಲು, ದೇವರ ಪೂಜೆಯ ಅಭಿಷೇಕಕ್ಕೆ ಶುದ್ಧ ನೀರು ಲಭ್ಯವಾಗದೇ ಜನ ಪರಿತಪಿಸುವಂತಾಗಿದೆ. ಇನ್ನು ಈ ಯೋಜನೆಯ ಭಾಗವಾಗಿ ನಿರ್ಮಾಣಗೊಂಡಿರುವ ವೆಟ್‌ವೆಲ್ ಸಾಂಕ್ರಾಮಿಕ ರೋಗಗಳ ಉಗಮಸ್ಥಾನವಾಗಿದೆ. ವೆಟ್‌ವೆಲ್ ಸಮೀಪದಿಂದಲೂ ಹಾದುಹೋಗುವಂತಿಲ್ಲ ಇಲ್ಲಿನ ಪರಿಸ್ಥಿತಿ ತುಂಬಾ ಕಲುಷಿತಗೊಂಡಿದೆ. ಇಲ್ಲಿನ ನಿವಾಸಿಗಳು ಊರನ್ನು ತೊರೆಯುವ ಪರಿಸ್ಥಿತಿ ಉಂಟಾಗಿದ್ದು, ಇಲ್ಲಿನ ತೀರ ಪ್ರದೇಶದಲ್ಲಿ ಮೀನುಗಾರಿಕೆ ನಡೆಸುವ ಬೆಸ್ತರ ಸ್ಥಿತಿ ಶೋಚನೀಯವಾಗಿದ್ದು ಈ ವೈಫಲ್ಯದಿಂದ ಅವರು ಸಹ ತೊಂದರೆಗೊಳಗಾಗಿದ್ದಾರೆ, ಇಲ್ಲಿನ ಸಮಸ್ಯೆಯ ಬಗ್ಗೆ ಜನ ಪ್ರತಿನಿಧಿಗಳು, ಅಧಿಕಾರಿಗಳ ಬಳಿ ಹೇಳಿ ನಿರಾಸೆಗೊಂಡಿದ್ದಾರೆ. ಭರವಸೆ ನೀಡಿರುತ್ತಾರೆಯೇ ಹೊರತು ಈತನಕ ಸಮಸ್ಯೆಯ ಪರಿಹಾರಗೊಂಡಿಲ್ಲ. ಈ ಎಲ್ಲಾ ಅವ್ಯವಸ್ಥೆಗಳಿಂದ ರೊಚ್ಚಿಗೆದ್ದ ಊರಿನವರು ಜನ ನಿಬಿಡ ಪ್ರದೇಶದಿಂಧ ಈ ಯೋಜನೆಯನ್ನು ಬೇರೆಡೆಗೆ ವರ್ಗಾಯಿಸಬೇಕೆಂಬ ವಿಷಯ ಕುರಿತು ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

***<>***

**ಸರ್ಕಾರದ ಉತ್ತರ:** ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಹಣಕಾಸು ಸಂಸ್ಥೆ(ಕೆ.ಯು.ಐ.ಡಿ.ಎಫ್.ಸಿ) ಏಷ್ಯನ್ ಅಭಿವೃದ್ಧಿ ಬ್ಯಾಂಕ್(ಎಡಿಬಿ) ಮತ್ತು ಕೇಂದ್ರ ಪುರಸ್ಕೃತ ಅಮೃತ್ ನೆರವಿನಡಿ ಸರ್ಕಾರದ ಆದೇಶ ಸಂಖ್ಯೆ: ನಅಇ 446 ಪಿಆರ್‌ಜೆ 2014, ಬೆಂಗಳೂರು, ದಿನಾಂಕ: 14.12.2016 ರಂತೆ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಹೂಡಿಕೆ ಕಾರ್ಯಕ್ರಮ (ಕ್ವಿಮಿಪ್) 'ಜಲಸಿರಿ' ಯೋಜನೆಯಡಿ ರಾಜ್ಯದ ಆಯ್ದ ಎಂಟು (8) ಪಟ್ಟಣ/ನಗರಗಳಲ್ಲಿ 24/7 ಕುಡಿಯುವ ನೀರು ಸರಬರಾಜು ಕಾಮಗಾರಿ ಮತ್ತು ಒಳಚರಂಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

..2

ಯೋಜನೆಯನ್ನು 2014 ರಿಂದ 2024 ರ 10 ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ಕ್ವಿಮಿಪ್ ಕಾರ್ಯಕ್ರಮವನ್ನು 2 ಟ್ರ್ಯಾಂಚ್ ಗಳಾಗಿ ವಿಭಾಗಿಸಲಾಗಿದ್ದು, ಟ್ರ್ಯಾಂಚ್-1 ರಲ್ಲಿ ದಾವಣಗೆರೆ, ಹರಿಹರ, ರಾಣೆಬೆನ್ನೂರು ಮತ್ತು ಬ್ಯಾಡಗಿ ಪಟ್ಟಣ/ನಗರಗಳನ್ನು ಒಳಗೊಂಡಿರುತ್ತದೆ. ಟ್ರ್ಯಾಂಚ್-2 ರಲ್ಲಿ ಮಂಗಳೂರು, ಪುತ್ತೂರು, ಉಡುಪಿ ಮತ್ತು ಕುಂದಾಪುರ ಪಟ್ಟಣ/ನಗರಗಳು ಒಳಗೊಂಡಿರುತ್ತದೆ.

ಮಂಗಳೂರು ನಗರದಲ್ಲಿ ಕ್ವಿಮಿಪ್ ಕಾರ್ಯಕ್ರಮದಡಿ ಎಡಿಬಿ ಮತ್ತು ಕೇಂದ್ರ ಪುರಸ್ಕೃತ ಅಮೃತ್ ನೆರವಿನಡಿ 2 ಕುಡಿಯುವ ನೀರು ಸರಬರಾಜು ಕಾಮಗಾರಿ ಮತ್ತು 5 ಒಳಚರಂಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ವಿವರ ಈ ಕೆಳಗಿನಂತಿದೆ.

1. ಮಂಗಳೂರು ನಗರದ ರಾಮಲಕಟ್ಟೆ ಪ್ರದೇಶದಲ್ಲಿ 20 ಎಂ.ಎಲ್.ಡಿ ಸಾಮರ್ಥ್ಯದ ನೀರು ಶುದ್ಧೀಕರಣ ಘಟಕ ನಿರ್ಮಾಣ ಕಾಮಗಾರಿ
2. ಮಂಗಳೂರು ನಗರದಲ್ಲಿ ನಿರಂತರ (24/7) ನೀರು ಸರಬರಾಜು ಕಾಮಗಾರಿ
3. ಮಂಗಳೂರು ನಗರದ ವಲಯ 1,4&7 ರಲ್ಲಿ ಹಾಲಿ ಇರುವ ಒಳಚರಂಡಿ ವ್ಯಸ್ಥೆಯ ಪುನರ್ ನಿರ್ಮಾಣ ಕಾಮಗಾರಿ
4. ಮಂಗಳೂರು ನಗರದ ವಲಯ 7 (lateral) ರಲ್ಲಿ ಹಾಲಿ ಇರುವ ಒಳಚರಂಡಿ ವ್ಯವಸ್ಥೆಯ ಪುನರ್ ನಿರ್ಮಾಣ ಕಾಮಗಾರಿ
5. ಮಂಗಳೂರು ನಗರದ ವಲಯ 3&5 ರಲ್ಲಿ ಹಾಲಿ ಇರುವ ಒಳಚರಂಡಿ ವ್ಯವಸ್ಥೆಯ ಪುನರ್ ನಿರ್ಮಾಣ ಕಾಮಗಾರಿ
6. ಮಂಗಳೂರು ನಗರದ ವಲಯ 9,12&12 ರಲ್ಲಿ ಒಳಚರಂಡಿ ವ್ಯವಸ್ಥೆಯ ಒದಗಿಸುವ ಕಾಮಗಾರಿ
7. ಮಂಗಳೂರು ನಗರದ ಸೂರತ್ಕಲ್ ವಲಯ ಒಳಗೊಂಡಂತೆ ಹಾಲಿ ಇರುವ ಒಳಚರಂಡಿ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಕಾಮಗಾರಿ

ಮಂಗಳೂರು ನಗರದ ಸುರತ್ಕಲ್ ವಲಯ ಒಳಗೊಂಡಂತೆ ಹಾಲಿ ಇರುವ ಒಳಚರಂಡಿ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಕಾಮಗಾರಿಯನ್ನು ಕೇಂದ್ರ ಪುರಸ್ಕೃತ ಅಮೃತ್ ನೆರವಿನೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದ್ದು, ಸುರತ್ಕಲ್ ವಲಯದಲ್ಲಿ ಹಿಂದಿನ ಯೋಜನೆಯಲ್ಲಿ 2006 ರಿಂದ 2011 ರ ಅವಧಿಯಲ್ಲಿ ಒಳಚರಂಡಿ ವ್ಯವಸ್ಥೆಯ ಮ್ಯಾನ್‌ಹೋಲ್‌ಗಳನ್ನು ಸ್ಥಳೀಯವಾಗಿ ಲಭ್ಯವಿರುವ ಲ್ಯಾಟರೈಟ್ ಸ್ಟೋನ್‌ಗಳಿಂದ ನಿರ್ಮಿಸಲಾಗಿರುತ್ತದೆ. ಅದರಲ್ಲಿ ಕೆಲವೊಂದು ಲ್ಯಾಟರೈಟ್ ಸ್ಟೋನ್‌ಗಳಿಂದ ನಿರ್ಮಿಸಲ್ಪಟ್ಟ ಮ್ಯಾನ್‌ಹೋಲ್‌ಗಳು ಕುಸಿದು, ಮ್ಯಾನ್‌ಹೋಲ್‌ಗಳು ಮತ್ತು ಒಳಚರಂಡಿ ಪೈಪ್‌ಗಳು ಬಂದ್ ಆಗಿ ಸ್ಥಳೀಯ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆ ಅಸ್ತವ್ಯಸ್ಥಗೊಂಡಿರುತ್ತದೆ.

ಅಲ್ಲದೇ, ರಾಜಕಾಲುವೆ ಬದಿಯಲ್ಲಿ ನಿರ್ಮಿಸಲಾದ ಮ್ಯಾನ್‌ಹೋಲ್‌ಗಳು ರಾಜಕಾಲುವೆಯಲ್ಲಿ ಹರಿಯುವ ಮಳೆ ನೀರಿನಿಂದಾಗಿ ಹಲವು ಕಡೆಗಳಲ್ಲಿ ಕುಸಿದಿರುತ್ತದೆ.

..3

ಈ ಹಿನ್ನೆಲೆಯಲ್ಲಿ, ಕೇಂದ್ರ ಪುರಸ್ಕೃತ ಅಮೃತ್ ನೆರವಿನೊಂದಿಗೆ ಮಂಗಳೂರು ನಗರದ ಸುರತ್ಕಲ್ ವಲಯ ಒಳಗೊಂಡಂತೆ ಹಾಲಿ ಇರುವ ಒಳಚರಂಡಿ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿರುತ್ತದೆ.

ಕಾಮಗಾರಿಯ ಗುತ್ತಿಗೆ ಕಾರ್ಯಾದೇಶವನ್ನು 06.06.2018 ರಂದು ನೀಡಲಾಗಿರುತ್ತದೆ. ಕಾಮಗಾರಿಯ ಪರಿಷ್ಕೃತ ಮೊತ್ತ ರೂ 72.76 ಕೋಟಿಗಳು. ಕಾಮಗಾರಿಯನ್ನು 31.12.2021ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿರುತ್ತದೆ. ಈ ಕಾಮಗಾರಿಯು ಪ್ರಮುಖವಾಗಿ

1. 29.17 ಕಿ.ಮೀ ಪೈಪ್ ಲೈನ್ ಅಳವಡಿಸುವುದು,
2. 1492 ಸಂಖ್ಯೆ ಹೊಸ ಆರ್‌ಸಿಸಿ ಮ್ಯಾನ್ ಹೋಲ್‌ಗಳ ನಿರ್ಮಾಣ
3. 116 ಕಿ.ಮೀ ಉದ್ದದ ಹಾಲಿ ಒಳಚರಂಡಿ ಪೈಪ್‌ನ ಕ್ಲೀನ್ ಮಾಡಿ ಮರು ಬಳಕೆಗೆ ಸಿದ್ಧಪಡಿಸುವುದು,
4. 3.0 ಕಿ.ಮೀ ತಡೆಗೋಡೆ ನಿರ್ಮಾಣ ಕಾಮಗಾರಿ ಹಾಗೂ
5. 4 ವೆಟ್‌ವೆಲ್‌ಗಳ ದುರಸ್ತಿ ಕಾಮಗಾರಿ ಗಳನ್ನು ಒಳಗೊಂಡಿರುತ್ತದೆ.

ಇದರಲ್ಲಿ ಸುರತ್ಕಲ್ ಪ್ರದೇಶದಲ್ಲಿ ಈ ಕೆಳಕಂಡ ಕಾಮಗಾರಿಗಳು ಒಳಗೊಂಡಿರುತ್ತವೆ.

1. 10.5 ಕಿ.ಮೀ. ಪೈಪ್ ಲೈನ್ ಅಳವಡಿಸುವುದು
2. 704 ಸಂಖ್ಯೆ ಹೊಸ ಆರ್‌ಸಿಸಿ ಮ್ಯಾನ್ ಹೋಲ್‌ಗಳ ನಿರ್ಮಾಣ.
3. 116 ಕಿ.ಮೀ ಉದ್ದದ ಹಾಲಿ ಒಳಚರಂಡಿ ಪೈಪ್‌ನ ಕ್ಲೀನ್ ಮಾಡಿ ಮರುಬಳಕೆ ಸಿದ್ಧಪಡಿಸುವುದು.
4. 2 ಕಿ.ಮೀ ನಷ್ಟು ತಡೆಗೋಡೆ ನಿರ್ಮಾಣ.
5. 4 ವೆಟ್‌ವೆಲ್‌ಗಳ ದುರಸ್ತಿ ಕಾಮಗಾರಿ

ಪ್ರಸ್ತುತ ಪೂರ್ಣಗೊಂಡಿರುವ ಕಾಮಗಾರಿಗಳ ವಿವರ ಕೆಳಕಂಡಂತಿದೆ.

1. 20.79 ಕಿ.ಮೀ ಪೈಪ್ ಲೈನ್ ಅಳವಡಿಸಲಾಗಿರುತ್ತದೆ.
2. 1245 ಸಂಖ್ಯೆ ಹಾಲಿ ಇರುವ ಲ್ಯಾಟರೈಟ್ ಮ್ಯಾನ್‌ಹೋಲ್‌ಗಳನ್ನು ಬದಲಾಯಿಸಿ ಆರ್‌ಸಿಸಿ ಮ್ಯಾನ್ ಹೋಲ್‌ಗಳ ನಿರ್ಮಾಣ.
3. 74 ಕಿ.ಮೀ ಉದ್ದದ ಹಾಲಿ ಒಳಚರಂಡಿ ಪೈಪ್‌ನ ಕ್ಲೀನ್ ಮಾಡಿ ಮರುಬಳಕೆಗೆ ಸಿದ್ಧಪಡಿಸಲಾಗಿರುತ್ತದೆ
4. 2.56 ಕಿ.ಮೀ ತಡೆಗೋಡೆ ನಿರ್ಮಾಣ ಕಾಮಗಾರಿ
5. ವೆಟ್‌ವೆಲ್‌ಗಳ ಯಂತ್ರೋಪಕರಣ ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಹಾಲಿಯಿರುವ ವೆಟ್‌ವೆಲ್ ಗಳು ಸರಿಯಾಗಿ ಕಾರ್ಯನಿರ್ವಹಿಸದೇ ಇರುವುದರಿಂದ ತ್ಯಾಜ್ಯವನ್ನು ತ್ಯಾಜ್ಯ ಸಂಸ್ಕರಣ ಘಟಕಕ್ಕೆ ಸಾಗಿಸಲು ಸಾಧ್ಯವಾಗದ ಕಾರಣ ಹಾಗೂ ಕೆಲವೊಂದು ಪ್ರದೇಶಗಳಲ್ಲಿ ಮನೆಗಳ ಮೇಲ್ಛಾವಣಿಯ ಮಳೆ ನೀರನ್ನು ಒಳಚರಂಡಿಗೆ ಸಂಪರ್ಕ ನೀಡಿದ್ದು ಕಂಡುಬಂದಿರುತ್ತದೆ. ಈ ಕಾರಣದಿಂದ ಜೋರಾಗಿ ಮಳೆ ಬಂದ ಸಂದರ್ಭದಲ್ಲಿ ಮ್ಯಾನ್ ಹೋಲ್‌ಗಳು ತುಂಬಿ ರಸ್ತೆ, ಚರಂಡಿಯಲ್ಲಿ ತ್ಯಾಜ್ಯ ನೀರು ಹರಿಯುತ್ತಿರುವುದು ಕಂಡುಬಂದಿರುತ್ತದೆ.

..4

ಆದಕಾರಣ ದಿನಾಂಕ 23.10.2020 ರಂದು ಮಹಾನಗರ ಪಾಲಿಕೆಯಿಂದ ಉಪ ಆಯುಕ್ತರು ಹಾಲಿ ಇರುವ 4 ವೆಟ್‌ವೆಲ್ ಮತ್ತು ತ್ಯಾಜ್ಯ ಸಂಸ್ಕರಣಾ ಘಟಕ (ಎಸ್‌ಟಿಪಿ)ದ ಪಂಪ್‌ಗಳು, ಪ್ಯಾನಲ್ ಬೋರ್ಡುಗಳು ಮತ್ತು ಇತರ ಕೆಲವೊಂದು ಉಪಕರಣಗಳು ಕಾರ್ಯ ನಿರ್ವಹಿಸದೇ ದುರಸ್ತಿ ಪಡಿಸಲು ಸಾಧ್ಯವಾಗುತ್ತಿಲವೆಂದು ಈ ಎಲ್ಲಾ ಉಪಕರಣಗಳನ್ನು ಹೊಸದಾಗಿ ಅಳವಡಿಸಲು ಕೆಯುಐಡಿಎಫ್‌ಸಿ ಗೆ ಪತ್ರದ ಮೂಲಕ ಮನವಿ ಮಾಡಿರುತ್ತಾರೆ.

ಇದರ ಬಗ್ಗೆ ಮಂಗಳೂರು ಉತ್ತರ, ಶಾಸಕರೊಂದಿಗೆ ಪರಿಶೀಲಿಸಿ, 4 ವೆಟ್‌ವೆಲ್‌ಗಳು ಮತ್ತು ತ್ಯಾಜ್ಯ ಸಂಸ್ಕರಣಾ ಘಟಕ (ಎಸ್‌ಟಿಪಿ)ದ ಯಂತ್ರೋಪಕರಣಗಳನ್ನು ಸಂಪೂರ್ಣವಾಗಿ ಬದಲಾಯಿಸಲು ಕೋರಿದ್ದು, ಅದರಂತೆ ಈ ಹೆಚ್ಚುವರಿ ಕಾಮಗಾರಿಯನ್ನು ದಿನಾಂಕ 25.03.2021 ರಂದು ರೂ. 5.19 ಕೋಟಿ ಮೊತ್ತಕ್ಕೆ ಅನುಮೋದನೆ ನೀಡಿದ್ದು, ಯಂತ್ರೋಪಕರಣಗಳ ಖರೀದಿಗಾಗಿ ಈಗಾಗಲೇ ಕ್ರಮವಹಿಸಲಾಗಿದೆ.

ಕೋವಿಡ್-19 ರ ಒಂದು ಮತ್ತು ಎರಡನೇ ಅಲೆಯ ಕಾರಣ ಕಾಮಗಾರಿಯ ಪ್ರಗತಿಯಲ್ಲಿ ವಿಳಂಬವಾಗಿದ್ದು, ಕರಾವಳಿಯಲ್ಲಿ ಮಳೆ ತಗ್ಗಿದ ನಂತರ ಪ್ರಗತಿಯನ್ನು ತ್ವರಿತಗೊಳಿಸಿ ಕಾಮಗಾರಿಯನ್ನು ಡಿಸೆಂಬರ್ 2021 ರೊಳಗೆ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.

ಅಲ್ಲದೇ, ಕಾಮಗಾರಿಯು ಪೂರ್ಣಗೊಂಡ ನಂತರ 5 ರಿಂದ 10 ವರ್ಷಗಳ ಅವಧಿಗೆ ಸದರಿ ಅಭಿವೃದ್ಧಿ ಪಡಿಸಿದ ವ್ಯವಸ್ಥೆಯನ್ನು ಉತ್ತಮವಾಗಿ ನಿರ್ವಹಣೆ ಮಾಡಲು ಹೊರಗುತ್ತಿಗೆ ನೀಡುವಂತೆ ಮತ್ತು ಮನೆಗಳ ಮೇಲ್ಚಾವಣಿಯ ಮಳೆ ನೀರನ್ನು ಒಳಚರಂಡಿಗೆ ಸೇರ್ಪಡೆ ಮಾಡದಂತೆ ಸೂಕ್ತ ನಿಯಮಗಳನ್ನು ರೂಪಿಸುವಂತೆ ಮಹಾನಗರ ಪಾಲಿಕೆಗೆ ಸಲಹೆ ನೀಡಲಾಗುವುದು.

ಕಡತ ಸಂಖ್ಯೆ: ನಅಇ 185 ಪಿ.ಆರ್.ಜೆ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು